Sri B. D. JATTI.—The appointments will be made in accordance with the rules. But the opinion expressed on the floor of the House will be conveyed to the Members of the Public Service Commission.

ಶ್ರೀ ಟಿ. ಎನ್. ಮೂಡಲಗಿರಿ ಗೌಡ.—ಪಬ್ಲಿಕ್ ಸರ್ವಿಸ್ ಕಮಿಷನರವರು ರೀಜನ್ ಪರಿಯಾ ಕನ್‌ಸಿಡರ್ ಮಾಡುವುದಾದರೆ ಡಿಸ್ಟ್ರಿಕ್ಟ್‌ವಾರು ಕನ್‌ಸಿಡರ್ ಮಾಡುವುದಕ್ಕೆ ಸಾಧ್ಯವೇ ?

Sri B. D. JATTI.—I have already replied that appointments are not made on region basis.

Sri GAJANANA PANDIT.—The Chief Minister was pleased to say that the opinion of the House would be conveyed to the Public Service Commission; but supposing the present conditions continue; are the integrated areas to suffer the same fate as long as the present members of the Public Service Commission continue ?

Sri B. D. JATTI.—Again it is the presumption of the Hon'ble Member that certain areas have suffered.

ಶ್ರೀ ಕುಂದೂರು ರುದ್ರಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಕೆಲಸ ಹೆಚ್ಚಾಗಿರುವುದರಿಂದ ಇನ್ನೂ ಇಬ್ಬರು ಮೆಂಬರುಗಳನ್ನು ಹೆಚ್ಚಿಗೆ ಅಪಾಯಿಂಟ್ ಮಾಡುವುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಕೆಲಸ ಜಾಸ್ತಿಯಾಗಿದೆ; ಈಗ ಇರುವುದಕ್ಕಿಂತ ಹೆಚ್ಚಿಗೆ ಮೆಂಬರುಗಳನ್ನು ಕೊಡ ಬೇಕು ಎಂದು ಹೇಳಿದರೆ ಆಗ ಸರ್ಕಾರ ಯೋಚನೆ ಮಾಡಬಹುದು. ಅಂಥಾದ್ದು ಏನೂ ಅವರಿಂದ ಬಂದಿಲ್ಲ.

Transfers of low paid Officials

*Q.—184. Sri G. N. PUTTANNA (Tumkur).—

Will the Government be pleased to state :—

(*a*) whether they have laid down any principle in transferring officials whose pay is less than Rs. 150 per month, from one place to another in the State ;

(*b*) whether they are aware that low paid clerks, if transferred from out of the districts to which they belong will be put to a lot of trouble ;

(*c*) whether the Government will consider not to transfer any clerk or official whose pay is Rs. 150 or below out of the district to which he belongs ?

A.—Sri B. D. JATTI (Chief Minister).—

(*a*) There are general instructions governing the transfers of officials and officers.

(*b*) Yes.

(*c*) Except in cases where their stay in the district is considered to be particularly undesirable no such transfers are generally made.

ಶ್ರೀ ಜಿ. ಎನ್. ಪುಟ್ಟಣ್ಣ.—ತಿಂಗಳಿಗೆ 100—150 ರೂಪಾಯಿಗಳಿಗೆ ಕಡಮೆ ಸಂಬಳ ಪಡೆಯುವಂಥಾ ಅಧಿಕಾರಿಗಳನ್ನು ಆಯಾ ಡಿಸ್ಟ್ರಿಕ್ಟು ಬಿಟ್ಟು ಬೆಂಗಳೂರಿ ನಿಂದ ಧಾರವಾಡಕ್ಕೆ ಹಾಕಿ ಅವರನ್ನು ಅಲ್ಲಿಗೆ ಹೋಗ ಬೇಕೆಂದು ಫೋರ್ಸ್ ಮಾಡಿದರೆ ಅವರು ಒಂದೆರಡು ದಿವಸ ಹೋಗಿ ಇದ್ದು ಕೆಲಸ ಮಾಡಿ ಆಮೇಲೆ ರಜಾ ಹಾಕಿ ಬರುತ್ತಾರೆ. ಅದರಿಂದ ಸರ್ಕಾರಿ ಕೆಲಸ ಆಗುವುದಿಲ್ಲ.

Is the Government prepared to issue a circular to the Heads of Departments not to make transfers out of Districts to which they belong ?

Sri B. D. JATTI.—There are posts for districts, for regions and divisions. Generally, the Government is not interested in transferring any Government servant who is drawing less than Rs. 150 out of the district. If a certain department is reorganised and if the staff is more, in that case out of compulsion they will have to be transferred. If it is the intention to punish a particular Government servant, he will have to be transferred. Otherwise, generally they will be kept in the district concerned.

Sri G. N. PUTTANNA.—I am not bothered about persons who are undesirable. They may be sent event to Andamans. I have no objection. If there is no accommodation within the district, and if there is any chance to serve at least in the neighbouring district, why should not the Government consider the case of such poor paid officials ?

Sri B. D. JATTI.—The Government generally consider such cases and keep them as far as possible in the district. Unless it is inevitable, we are not going to transfer. There is no question of transferring them to Andamans because we have no jurisdiction.

Sri G. N. PUTTANNA.—In spite of the object of the Government which is rather very good, some of the Heads

of the Departments are forcing some of the clerks to go out of their Districts. Such people will worry not only Ministers, but the M.L.As. and other officers also. To prevent this, will the Government be pleased to issue circulars to prevent such transfer ?

Sri B. D. JATTI.—Perhaps, the Hon'ble Member is more pestered by Government servants. If he avoids it, he will do a great service to the Government.

1-30 P.M.

Prevention of Cow Slaughter.

*Q.—252. Sri M. HANUMANTHIAH (Nelamangala).—

Will the Government be pleased to state :—

(*a*) whether it is a fact that the Prevention of Cow Slaughter Act is in force in State ;

(*b*) whether they are aware that aged cows are being taken to the Cantonment Area on the public road of Tumkur-Bangalore for being slaughtered ;

(*c*) the action taken against persons responsible ?

*A.—Sri T. SUBRAMANYA (Minister for Law, Labour and Local Self-Government).—

(*a*) The Mysore Prevention of Cow Slaughter Act, 1948 is in force in the Districts of erstwhile Mysore State, except in Bellary District.

(*b*) No such instances have come to notice.

(*c*) Does not arise in view of reply to (*b*) above.

ಶ್ರೀ ಎಂ. ಹನುಮಂತಯ್ಯ.— (ಬ) ಗೆ ಉತ್ತರವಾಗಿ ಸರ್ಕಾರದವರ ಗಮನಕ್ಕೆ ಬಂದಿಲ್ಲವೆಂದು ತಿಳಿಸಲಾಗಿದೆ. ಗಮನಕ್ಕೆ ತಂದರೆ ಏನು ಮಾಡುತ್ತೀರಿ ?

†ಶ್ರೀ ಟಿ. ಸುಬ್ರಹ್ಮಣ್ಯ.—ಆಗ ಆಲೋಚನೆ ಮಾಡುತ್ತೇವೆ.

ಶ್ರೀ ಎಂ. ಹನುಮಂತಯ್ಯ.—ಕಂಟೋನ್‌ಮೆಂಟಿನಲ್ಲಿ ನೂರಾರು ರಾಸುಗಳ ವಧೆಯಾಗಿ ಆ ಮಾಂಸ ಅಲ್ಲಿ ಮಾರಾಟವಾಗುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದೇ ಇಲ್ಲವೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಗೋವಧೆ ಎಲ್ಲೆಲ್ಲಿ ನಡೆಯುತ್ತದೆಂದು ಪರಿವೀಕ್ಷಕರು ಬರುತ್ತಾರೋ ಅಲ್ಲೆಲ್ಲಾ ತಪ್ಪಿಸ್ಥರನ್ನು ಹಿಡಿದು ಶಿಕ್ಷೆ ಮಾಡಿಸುತ್ತಿದ್ದೇವೆ. ಇದನ್ನು ತಡೆಗಟ್ಟುವುದಕ್ಕಾಗಿ ಒಂದು ಸ್ಪೆಷಲ್ ಸ್ಕ್ವಾಡನ್ನೇ ಇಟ್ಟಿದ್ದೇವೆ.

Sri J. B. MALLARADHYA.—With reference to reply to (*a*), is it also in force in all the integrated areas of the State ?

Sri T. SUBRAMANYA.—No.

ಶ್ರೀ ಜೆ. ಬಿ. ಮಲ್ಲಾರಾಧ್ಯ.—" Except in Bellary District " ಎಂದರೆ ಅರ್ಥವೇನು ?

Sri T. SUBRAMANYA.—The Mysore Prevention of Cow Slaughter Act, 1948 is in force in the Districts of the erstwhile Mysore State, except in Bellary District.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅದಕ್ಕೆ ಕಾರಣವೇನು ?

ಶ್ರೀ ಟಿ. ಸುಬ್ರಹ್ಮಣ್ಯ.—ಆ ಕಾರಣ ಮಾನ್ಯ ಸದಸ್ಯರಿಗೂ ಗೊತ್ತಿದೆ. ಈ ಆಕ್ಟನ್ನು ಆ ಜಿಲ್ಲೆಗೆ ಅಪ್ಲೈ ಮಾಡ ಬೇಕೆಂದು ವಿಚಾರ ಮಾಡುತ್ತಿದ್ದಾಗ ಹೈಕೋರ್ಟಿನಲ್ಲಿ ಒಂದು ರಿಟ್ ಪೆಟಿಷನ್ ದಾಖಲಾಗಿದೆ. ಅದರ ತೀರ್ಮಾನವನ್ನು ಕಾಯುತ್ತಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ಸಹಸ್ರಾರು ದನಗಳನ್ನು ಮೈಸೂರು ದೇಶದ ಗಡಿ ಸರಹದ್ದಿಗೆ ತೆಗೆದುಕೊಂಡು ಹೋಗಿ—ಮದ್ರಾಸ್ ಗಡಿ ಪ್ರದೇಶಗಳಲ್ಲಿ ಅವನ್ನು ಕೊಲೆ ಮಾಡಿ ಅಲ್ಲಿಂದ ಮಾಂಸವನ್ನು ತಂದು ಕಂಟೋನ್‌ಮೆಂಟಿನಲ್ಲಿ ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಎಲ್ಲೆಲ್ಲಿ ಗಮನಕ್ಕೆ ಬಂದಿದೆಯೋ ಅಲ್ಲಲ್ಲಿ ಕಾನೂನಿನ ಪ್ರಕಾರ ಅವರನ್ನು ಶಿಕ್ಷೆಗೊಳಗು ಮಾಡುತ್ತಿದ್ದೇವೆಂದು ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಟಿ. ಸುಬ್ರಹ್ಮಣ್ಯ.—ಸಹಸ್ರಾರು ದನಗಳನ್ನು ಕೊಲೆ ಮಾಡುತ್ತಿದ್ದಾರೆಂಬ ಅಂಶವನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಹಾಗಾಗಿದ್ದರೆ ಆ ವಿಚಾರ ನಮ್ಮ ಗಮನಕ್ಕೆ ಬಂದೇ ಬರುತ್ತಿತ್ತು. ನಮ್ಮನೆ ಏನೋ ಆ ರೀತಿ ಅವರಿವರು ಕೂಗುತ್ತಿದ್ದಾರೆಂದು ಅದನ್ನೇ ಒಂದು ದೊಡ್ಡದಾಗಿ ಮಾಡುವುದು ಸರಿಯಲ್ಲ. ಅದಕ್ಕಾಗಿಯೇ ಸ್ಪೆಷಲ್ ಪೋಲೀಸ್ ಸಿಬ್ಬಂದಿಯನ್ನು ಇಟ್ಟಿದ್ದೇವೆ. ಅವರು ನಿಗಾ ಇಟ್ಟು ನೋಡುತ್ತಿದ್ದಾರೆ.

Sri S. D. KOTHAVALE.—Are the Government aware that there is a similar statute in force in Bombay area ? If so, whether it is being properly enforced ?

Sri T. SUBRAMANYA.—Whatever laws are there are tried to be implemented very strictly.

ಶ್ರೀ ಟಿ. ಹನುಮಯ್ಯ.—ಮದ್ರಾಸಿನಿಂದ 'ಬೀಫ್' ಬರುತ್ತಿದೆಯೆಂದು ಹೇಳಿ ಕಂಟೋನ್‌ಮೆಂಟಿನಲ್ಲೇ ಗೋವುಗಳನ್ನು ಕೊಂದು ಮಾಂಸ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಇವೇ ದೂರುಗಳು ಸರ್ಕಾರದವರ ಗಮನಕ್ಕೆ ಅನೇಕಾವರ್ತಿ ಬಂದಿರುತ್ತವೆ. ಅವರಲ್ಲಿ ಅಷ್ಟೇನೂ ಹುರುಳಿಲ್ಲ. ಮದ್ರಾಸಿನಿಂದ ಬೀಫ್ ಬರುತ್ತಿದೆ ; ಇಲ್ಲಿ ಮಾರಾಟವಾಗುತ್ತಿದೆ.